ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 118-EK (NS)**

**Code No. : 118-EK (NS)**

# ಡಿ.ಇಡಿ. ಪ್ರಥಮ ವರ್ಷ

# D.Ed. FIRST YEAR

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.) — ಪರಿಸರ ಅಧ್ಯಯನ

# FACILITATING LEARNING ( LPS ) — ENVIRONMENTAL STUDIES

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)

(Kannada & English Versions)

**(ಹೊಸ ಪಠ್ಯವಸ್ತು)**

**(New Syllabus)**

ದಿನಾಂಕ : 15. 12. 2018 ]

Date : 15. 12. 2018 ]

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

(ಕನ್ನಡ ಭಾಷಾಂತರ)

(Kannada Version)

## ಭಾಗ – I

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : $10 \times 1 = 10$

1. "ಎಲ್ಲಾ ಸಜೀವಿಗಳು, ಸಂಪನ್ಮೂಲಗಳು ಮತ್ತು ಸಂರಕ್ಷಣೆಯ ವ್ಯವಸ್ಥೆ" ಈ ಕೆಳಗಿನ ಪರಿಸರಕ್ಕೆ ಸಂಬಂಧಿಸಿದ್ದು

   (A) ಸಾಮಾಜಿಕ (B) ರಾಜಕೀಯ

   (C) ಸ್ವಾಭಾವಿಕ (ನೈಸರ್ಗಿಕ) (D) ಆರ್ಥಿಕ

2. ಒಬ್ಬ ವ್ಯಕ್ತಿಯ ಬೆಳವಣಿಗೆ ಹಾಗೂ ವಿಕಾಸದ ಮೇಲೆ ಈ ಅಂಶವು ಹೆಚ್ಚು ಪ್ರಭಾವ ಬೀರುವುದಿಲ್ಲ

   (A) ಶಿಕ್ಷಣ (B) ಬಡತನ

   (C) ಆರ್ಥಿಕತೆ (D) ಅನ್ವೇಷಣೆ

3. 'ಮೂರ್ತ ಕ್ರಿಯಾ ಹಂತ'ವು ಮಕ್ಕಳ ಕಲಿಕೆಯಲ್ಲಿ ಒಂದು ಹಂತವೆಂದು ಪ್ರತಿಪಾದಿಸಿದ ಮನಃಶಾಸ್ತ್ರಜ್ಞ

(A) ಜೀನ್ ಪಿಯಾಜೆ (B) ಪೆಸ್ಟಾಲೋಜಿ

(C) ಜಾನ್‌ಡೂಯಿ (D) ರುಡಾಲ್ಫ್ ಸ್ಟೀನರ್

4. ಈ ಕೆಳಗಿನವುಗಳಲ್ಲಿ ಯಾವುದು ಪರಿಸರ ಅಧ್ಯಯನ ಶಿಕ್ಷಕರು ಮಕ್ಕಳನ್ನು ನೈಜಜಗತ್ತಿಗೆ ಪರಿಚಯಿಸುವುದರ ಉದ್ದೇಶವನ್ನು ಒಳಗೊಂಡಿಲ್ಲ

(A) ಪರಿಕಲ್ಪನೆಗಳ ಆಳವಾದ ಜ್ಞಾನ ನೀಡುವುದು

(B) ಜ್ಞಾನವನ್ನು ಇತರೆ ಸನ್ನಿವೇಶಗಳಿಗೆ ಅನ್ವಯಿಸುವುದು

(C) ಮಿತವಾದ ದೃಷ್ಟಿಕೋನ ಬೆಳೆಸುವುದು

(D) ಜ್ಞಾನವನ್ನು ಭೌತಿಕ ಮತ್ತು ಸಾಮಾಜಿಕ ಪರಿಸರಕ್ಕೆ ಸಂಬಂಧ ಕಲ್ಪಿಸುವುದು

5. ಈ ಕೆಳಗಿನ ಯಾವ ಅಂಶವು ಪರಿಸರ ಬೋಧನೆಯ ಮುಖ್ಯ ಉದ್ದೇಶವಾಗಿಲ್ಲ

(A) ಭೌತಿಕ ಮತ್ತು ಜೈವಿಕ ಪರಿಸರದ ಸತ್ಯಾಂಶಗಳನ್ನು ತಿಳಿಸುವುದು

(B) ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರದ ಪರಿಕಲ್ಪನೆ ಬೆಳೆಸುವುದು

(C) ತತ್ವಗಳು ಮತ್ತು ಪ್ರಕ್ರಿಯೆಗಳ ಬಗ್ಗೆ ಸರಿಯಾದ ತಿಳುವಳಿಕೆ ಬೆಳೆಸುವುದು

(D) ಸಮುದಾಯದ ವಿವಿಧ ಗುಂಪುಗಳಲ್ಲಿ ತಾರತಮ್ಯ ಬೆಳೆಸುವುದು

6. ಇವುಗಳಲ್ಲಿ ಯಾವುದು ಅನುಭವಾತ್ಮಕ ಕಲಿಕೆಯ ಅಂಶವಲ್ಲ ?

I. ಪರ್ಯಾಲೋಚನೆಗೆ ಅವಕಾಶ ಕಲ್ಪಿಸುವುದು

II. ಹೆಚ್ಚು ಹೆಚ್ಚು ಮಾಹಿತಿಯನ್ನು ನೀಡುವುದು

III. ಸಕ್ರಿಯ ಕಲಿಕೆಯ ವಾತಾವರಣ ಸೃಷ್ಟಿಸುವುದು

IV. ಅನುಭವಗಳನ್ನು ಕ್ರೋಢೀಕರಿಸುವುದು

*ಇವುಗಳಲ್ಲಿ :*

(A) II ಮಾತ್ರ ಸರಿ (B) IV ಮಾತ್ರ ಸರಿ

(C) I ಮತ್ತು III ಸರಿ (D) III ಮತ್ತು IV ಸರಿ

7. ಪರಿಸರ ಅಧ್ಯಯನದಲ್ಲಿ ನೈಜಾಂಶಗಳನ್ನು ಮಕ್ಕಳಿಗೆ ತಿಳಿಸಲು ಈ ಕೆಳಗಿನ ಉದಾಹರಣೆಯನ್ನು ಬಳಸಬಹುದು

(A) ಜೀರ್ಣಕ್ರಿಯೆಯ ಕುರಿತು ಮಾದರಿ ರಚನೆ

(B) ಪ್ರಾಣಿಗಳ ವರ್ಗೀಕರಣ ಕುರಿತು ವಿಡಿಯೋ ಚಿತ್ರಗಳ ಪ್ರದರ್ಶನ

(C) ಮಲಿನತೆಗೆ ಕಾರಣವಾಗಿರುವ ಗೃಹ ಕೃತ್ಯದ ಬಗ್ಗೆ ದತ್ತಾಂಶ ಸಂಗ್ರಹ

(D) ಮಾನವನ ಹೃದಯದ ಕಾರ್ಯ ಕುರಿತು ಚಿತ್ರ ಬರೆಸುವುದು

8. ಪರಿಸರ ಅಧ್ಯಯನ ಶಿಕ್ಷಕರೊಬ್ಬರು ಹತ್ತಿರದ ಸಕ್ಕರೆ ಕಾರ್ಖಾನೆ ನೋಡಲು ಮಕ್ಕಳನ್ನು ಕರೆದುಕೊಂಡು ಹೋಗಿದ್ದಾರೆ. ಇಂಥಹ ಸಮಯದಲ್ಲಿ ಈ ಕೆಳಗಿನ ಮಾಪನ ವಿದ್ಯಾರ್ಥಿಗಳನ್ನು ಮೌಲ್ಯಾಂಕಿಸಲು ಹೆಚ್ಚು ಸೂಕ್ತ

(A) ಲಿಖಿತ ಪರೀಕ್ಷೆಗಳು (B) ಪ್ರಶ್ನಾವಳಿಗಳು

(C) ನೈದಾನಿಕ ಪರೀಕ್ಷೆಗಳು (D) ವೀಕ್ಷಿಸಿದ ವಸ್ತುಗಳ ತಾಳೆಪಟ್ಟಿ

9. ಈ ಕೆಳಗಿನವುಗಳಲ್ಲಿ ಯಾವುದು ಮೂಲ ಅಜೈವಿಕ ಘಟಕವಾಗಿದೆ ?

(A) ಕಲ್ಲಿದ್ದಲು (B) ಡಿಸೇಲ್

(C) ನೀರು (D) ಪೆಟ್ರೋಲ್

10. ಹೊರ ಸಂಚಾರದ ಸಮಯದಲ್ಲಿ, ಈ ಕೆಳಗಿನ ವಿಚಾರಕ್ಕಾಗಿ ಮಕ್ಕಳಿಗೆ ಅವಕಾಶ ಮಾಡಿಕೊಡಬಾರದು

(A) ಸ್ಪರ್ಶ ಅನುಭವ

(B) ಮಕ್ಕಳು ತಮ್ಮ ತಮ್ಮಲ್ಲೇ ಮಾತನಾಡುವುದು

(C) ಮಾದರಿಗಳನ್ನು ಸಂಗ್ರಹಿಸುವುದು

(D) ಟಿಪ್ಪಣಿ ಬರೆಯುವುದು

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ಭಾವನಾತ್ಮಕ ಮತ್ತು ಸಾಮಾಜಿಕ ಕ್ಷೇತ್ರಗಳ ನಡುವಿನ ವ್ಯತ್ಯಾಸವೇನು ?

12. ಪರಿಸರ ಅಧ್ಯಯನ ಕಲಿಕೆಯ ಎರಡು ಪ್ರಮುಖ ಕಲಿಕಾಂಶಗಳನ್ನು ಬರೆಯಿರಿ.

13. 'ಪರಿಸರದ ಸೈದ್ಧಾಂತಿಕ ಅಂಶಗಳು ಹೇಗೆ ಒಂದು ಮಗುವನ್ನು ಪ್ರಭಾವ ಗೊಳಿಸುತ್ತದೆ' ? ವಿಷದೀಕರಿಸಿ.

14. ಸಜೀವಿಗಳಿಗೆ ಆವಾಸ ಸ್ಥಾನದ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.

15. ಪರಿಸರ ಅಧ್ಯಯನವನ್ನು ಪ್ರಾಥಮಿಕ ಹಂತದಲ್ಲಿ ಏಕೆ ಪರಿಚಯಿಸಲಾಗಿದೆ ಎಂಬುದಕ್ಕೆ ಎರಡು ಕಾರಣಗಳನ್ನು ನೀಡಿ.

16. IV ನೇ ತರಗತಿಯ ವಿದ್ಯಾರ್ಥಿಗಳಿಗೆ 'ರಾಷ್ಟ್ರೀಯ ಹಬ್ಬಗಳು' ಎಂಬ ಪರಿಕಲ್ಪನೆಯನ್ನು ಬೆಳೆಸಲು ಎರಡು ಚಟುವಟಿಕೆಗಳನ್ನು ಬರೆಯಿರಿ.

17. ಪರಿಸರ ಅಧ್ಯಯನ ಬೋಧನಾ ಕಲಿಕೆಯಲ್ಲಿ ಸಾಂದರ್ಭಿಕೀಕರಣದ ಎರಡು ಪ್ರಯೋಜನಗಳೇನು ?

18. ಪ್ರಾಥಮಿಕ ಶಾಲಾ ಹಂತದಲ್ಲಿ 'ಕಾಡುಗಳ ಸಂರಕ್ಷಣೆ' ಎಂಬ ವಿಷಯದಿಂದ ಮಕ್ಕಳಲ್ಲಿ ಬೆಳೆಸಬಹುದಾದ ಎರಡು ಮೌಲ್ಯಗಳಾವುವು ?

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಮತ್ತು (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ : $8 \times 5 = 40$

19. a) ಮಗುವಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಪರಿಸರದ ಯಾವುದಾದರೂ ಐದು ಅಂಶಗಳನ್ನು ವಿವರಿಸಿ.

*ಅಥವಾ*

b) ಎಳೆಯ ವಿದ್ಯಾರ್ಥಿಗಳ ಐದು ಗುಣಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

20. a) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ( NCF ) - 2005 ನೇ ಆಧಾರಿತ III ರಿಂದ V ನೇ ತರಗತಿಯ NCERT ಪಠ್ಯವಸ್ತುವಿನಲ್ಲಿರುವ ಪರಿಸರ ಅಧ್ಯಯದ ಐದು ಉದ್ದೇಶಗಳನ್ನು ಪಟ್ಟಿ ಮಾಡಿ.

***ಅಥವಾ***

b) ಪರಿಸರ ಅಧ್ಯಯನವು ಹೇಗೆ ಒಂದು ಸಮ್ಮಿಶ್ರ ಅಧ್ಯಯನ ಕ್ಷೇತ್ರವಾಗಿದೆ ? ವಿವರಿಸಿ.

21. a) ಅನುಭವಾತ್ಮಕ ಕಲಿಕೆಯ ಯಾವುದಾದರೂ ಹತ್ತು ಪ್ರಯೋಜನಗಳನ್ನು ಪಟ್ಟಿ ಮಾಡಿ.

***ಅಥವಾ***

b) ಪರಿಸರ ಅಧ್ಯಯನ ಬೋಧನೆಯ ವಿಷಯಾಧಾರಿತ ಸಂಯೋಜನೆಯ ಐದು ಅನುಕೂಲಗಳನ್ನು ಪಟ್ಟಿ ಮಾಡಿ, ಒಂದನ್ನು ವಿವರಿಸಿ.

22. a) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ( NCF ) - 2005 ರ ಐದು ಮಾರ್ಗದರ್ಶಿ ತತ್ವಗಳನ್ನು ತಿಳಿಸಿ. ಅವುಗಳನ್ನು ಪ್ರಸ್ತುತ ಪರಿಸರ ಅಧ್ಯಯನ ತರಗತಿಗಳಲ್ಲಿ ಹೇಗೆ ಸಂಯೋಜಿಸಿದೆ ? ಮೌಲ್ಯೀಕರಿಸಿ.

***ಅಥವಾ***

b) ಮಕ್ಕಳಲ್ಲಿ ಪರಿಸರ ಸ್ನೇಹಿ ಮನೋಧೋರಣೆಯನ್ನು ಬೆಳೆಸಲು ಬೇಕಾದ ಐದು ಪ್ರಮುಖಾಂಶಗಳನ್ನು ಬರೆದು ಮೌಲ್ಯೀಕರಿಸಿ.

23. a) ಶಾಲೆಯ ಸುತ್ತಲಿರುವ ಪರಿಸರವನ್ನು ಸಮೀಕ್ಷಿಸಲು ಬಳಸಬಹುದಾದ ಐದು ಅಂಶಗಳನ್ನು ಬರೆಯಿರಿ ಮತ್ತು ವಿವರಿಸಿ.

***ಅಥವಾ***

b) ತ್ಯಾಜ್ಯವನ್ನು ಪುನರ್ಬಳಕೆ ಮಾಡಿ ಕರಕುಶಲ ವಸ್ತುಗಳನ್ನು ತಯಾರಿಸುವ ಪರಿಕಲ್ಪನೆಯನ್ನು ಬೆಳೆಸಲು ನೀವು ಹಮ್ಮಿಕೊಳ್ಳುವ ಐದು ಕಾರ್ಯಕ್ರಮಗಳನ್ನು ತಿಳಿಸಿ.

24. a) ಪ್ರಾಥಮಿಕ ಶಾಲಾ ಹಂತದಲ್ಲಿ ಪರಿಸರ ಅಧ್ಯಯನ ಕಲಿಕೆಯಲ್ಲಿ 'ಕಥಾ ವಿಧಾನ' ಸೂಕ್ತ. ವಿಶ್ಲೇಷಿಸಿ.

***ಅಥವಾ***

b) ಪರಿಸರ ಅಧ್ಯಯನ ಬೋಧನೆಯಲ್ಲಿ 'ಗ್ರಾಮೀಣ ಸಮುದಾಯ' ಘಟಕವನ್ನು ವಿವಿಧ ಸಂದರ್ಭಗಳಲ್ಲಿ ಹೇಗೆ ನಿರ್ವಹಿಸಬಹುದು ಎಂಬುದನ್ನು ವಿಶ್ಲೇಷಿಸಿ.

25. a) ಪ್ರಾಥಮಿಕ ಮಟ್ಟದ ಪರಿಸರ ಅಧ್ಯಯನ ಬೋಧನೆಯಲ್ಲಿ ಬಳಸಬಹುದಾದ ಐದು ಸ್ವಾಭಾವಿಕ ಸಂಪನ್ಮೂಲಗಳನ್ನು ಚರ್ಚಿಸಿ.

***ಅಥವಾ***

b) ಸಾಂಕ್ರಾಮಿಕ ರೋಗಗಳ ಪರಿಕಲ್ಪನೆಯನ್ನು ಬೆಳೆಸಲು ಸ್ಥಳೀಯ ಸಂಪನ್ಮೂಲವನ್ನು ಹೇಗೆ ಬಳಸಬಹುದು ಎಂಬುದನ್ನು ಚರ್ಚಿಸಿ.

26. a) ನೀವು ಪ್ರಾಥಮಿಕ ಶಾಲಾ ಪರಿಸರ ಅಧ್ಯಯನ ಶಿಕ್ಷಕರಾಗಿ ಶಾಲಾ ಕೈತೋಟವನ್ನು ನಿರ್ವಹಣೆ ಮಾಡಲು ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳನ್ನು ಪಟ್ಟಿಮಾಡಿ, ಅವುಗಳನ್ನು ವಿವರಿಸಿ.

***ಅಥವಾ***

b) 'ಪ್ರಾಣಿಗಳ ಪ್ರಪಂಚ' ಎಂಬ ವಿಷಯವನ್ನು ಅನುಕೂಲಿಸಲು ಪರಿಸರ ಸಂಪನ್ಮೂಲ ಮೂಲೆಯನ್ನು ನೀವು ಹೇಗೆ ವಿನ್ಯಾಸ ಗೊಳಿಸುವಿರಿ ?

**( English Version )**

## PART – I

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. All living organisms, resources and preservation of system is related to which of the following environments ?

   (A) Social (B) Political

   (C) Natural (D) Economical

2. The factor that does not influence much on the growth and development of an individual is

   (A) Education (B) Poverty

   (C) Economic status (D) Exploration.

3. The psychologist who proposed concrete operational stage as one of the stages in children's learning is

   (A) Jean Piaget (B) Pestalozzi

   (C) John Dewey (D) Rudolf Steiner.

4. Which of the following is not the objective of exposing children to the real life world by EVS teacher ?

   (A) Providing deeper knowledge of concepts

   (B) Applying knowledge to other situations

   (C) Developing limited perspective

   (D) Relating knowledge to physical and social environment.

5. Which of the following factors is not the main objective of EVS teaching ?

   (A) Giving facts about biotic and abiotic environments

   (B) Developing concepts of natural and social environments

   (C) Developing proper understanding about principles and processes

   (D) Developing disparity among various groups of the community.

6. Which of the following is / are not the factor(s) of experiential learning ?

   I. Creating opportunity for reflection

   II. Providing more and more information

   III. Creating the atmosphere of active learning

   IV. Consolidating the experience.

   (A) Only II (B) Only IV

   (C) I and III (D) III and IV.

7. Which of the following examples can be used in EVS to make children know the facts ?

   (A) Preparing the model of digestive system

   (B) Exhibiting video films about classification of animals

   (C) Collecting data about domestic activities that are responsible for pollution

   (D) Drawing picture about functions of human heart.

8. An EVS teacher takes children to a closeby sugar factory. In this situation which of the following tools is more suitable to evaluate students ?

   (A) Written test (B) Questionnaire

   (C) Diagnostic test (D) Checklist of observed objects.

9. Which of the following is a basic inorganic component ?

   (A) Coal (B) Diesel

   (C) Water (D) Petrol.

10. During field trip children should not be allowed to

    (A) experience by touch

    (B) talk among themselves

    (C) collect samples

    (D) write notes.

## PART – II

Answer any *five* of the following questions, each answer not exceeding *half a* page. 5 × 2 = 10

11. What is the difference between emotional and social domain ?
12. Write two important learning aspects of EVS learning.
13. Enumerate how philosophical factors of environment influence a child.
14. Mention two importances of a habitat for living organisms.
15. Give two reasons why EVS is introduced at the primary level.
16. Write two activities to develop the concept of 'National Festivals' among IV Standard students.
17. What are the two advantages of contextualization in teaching and learning of EVS ?
18. Through the concept of 'protection of forest', what are the two values that could be developed in children of primary school level ?

## PART – III

There is an alternative question for each of the following. Answer either (a) *or* (b) of them, each answer not exceeding *one* page. 8 × 5 = 40

19. (a) Explain any five factors in the environment that influence a child's development.

*OR*

(b) Briefly explain five characteristics of a young learner.

20. (a) List out five objectives of EVS III-V Standard in the NCERT syllabus based on the NCF 2005.

*OR*

(b) How is EVS a composite study area ? Explain.

21. (a) List out any ten benefits of experiential learning.

*OR*

(b) List out five advantages of Thematic organization of content of EVS. Explain one.

22. (a) Mention five guiding principles of NCF 2005. How are these incorporated in the present EVS classroom ? Evaluate.

*OR*

(b) Write five important factors that are essential to develop environment friendly attitude among students and evaluate.

23. (a) Write and explain five factors that could be used to survey the surrounding environment of a school.

*OR*

(b) Mention five programmes that you would take up to develop the concept of preparing handicraft materials by recycling waste.

24. (a) Story method is suitable while learning EVS at primary school level. Analyse.

*OR*

(b) How the topic 'Rural Community' can be transacted in EVS teaching at different contexts ? Analyse.

25. (a) Discuss five natural resources that could be used in the transaction of EVS at primary level.

*OR*

(b) Discuss how local resource could be used to develop the concept of 'Communicable diseases'.

26. (a) List out the activities that could be taken up in managing school garden as an EVS teacher at primary level. Explain them.

*OR*

(b) How do you design an EVS resource corner to facilitate the concept of 'World of Animals' ?